# ಶ್ರಾವಣ


ಸೂರ್ಯನಿಲ್ಲದ ಬೆಳಗು,
ಸೂರ್ಯ ಮುಳುಗದ ಸಂಜೆ
ಚಂದ್ರತಾರೆಗಳಿರದ ಸಾಂದ್ರಮುಗಿಲು
ನೀನಿರದ ಈ ಮನೆಯ ಕದವ ತಟ್ಟುವ ಮೌನ

ದಿಗಿಲು ಹಿಡಿಸುವ ರಾತ್ರಿ, ಮಬ್ಬು ಹಗಲು.
ಐದೆಯರು ಖುತುಮತಿಗೆ ಐನೀರು ಎರೆದಂತೆ
ಒದ್ದೆಯಾಗಿದೆ ಪ್ರಕೃತಿ ಸುರಿವ ಮಳೆಗೆ
ಹೆಣ್ಣು ಶ್ರಾವಣದಂತೆ ಹಸಿರುಟ್ಟು ಬರುವಾಗ

ನೋಡಬಾರದೆ ಒಮ್ಮೆ ನಿಂತು ಮರೆಗೆ?
ಮೋಡಗಳ ಎದೆಯನ್ನು ಪರಚಿಕೊಳ್ಳುವ ಮಿಂಚು
ಗಾಯಗೊಂಡಿವೆ ಮನಸು ಆಳವಾಗಿ
ಮೌನ ಸೀಳುವ ಗುಡುಗು ಜೀವ ಹಿಂಡುವ ರಾತ್ರಿ

ಉರಿಯುತಿವೆ ಕಣ್ಣುಗಳು ದೀಪವಾಗಿ
ಇಳಿದು ಬರುತಿವೆ ಮೋಡ ನೆಲಮುಗಿಲು ಬೆಸೆದಂತೆ
ಶ್ರಾವಣವು ಎದುರಿಗಿದೆ ಸಾಕ್ಷಿಯಾಗಿ
ನೆನಪುಗಳು ಕೆದಕುತ್ತ ನರಳುತಿವೆ ಜೀವಗಳು

ತುಳುಕುತಿವೆ ಕಣ್ಣೀರು ಯಾರಿಗಾಗಿ?
ಈ ಜಗದ ದುಃಖವೇ ಉಮ್ಮಳಿಸಿ ಬಂದಂತೆ
ಏಸು ಕಣ್ಣುಗಳಿಂದ ಸುರಿವ ನೀರೋ?
ಅವರಿವರ ದುಃಖಕ್ಕೆ ಏನೇನು ಕಾರಣವೋ
ಶ್ರಾವಣವೆ ಶ್ರಾವಣವೆ ಹೇಳು ಬಾರೊ!



• **ಸಿದ್ಧರಾಜ ಪೂಜಾರಿ**